ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಮಗೆ ಈಗಾಗಲೇ ಅವಕಾಶವನ್ನು ಕೊಟ್ಟಿದ್ದೀರಿ. ನಮ್ಮ ಕಡೆ ಇನ್ನೂ ಕೆಲವರು ಮಾತನಾಡುವವರಿದ್ದಾರೆ.

(ಗೊಂದಲ)

ಅಧ್ಯಕ್ಷರು : ಈಗಾಗಲೇ ವಿಷಯ ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ಉತ್ತರ ಕೊಡಲಿ. ಉತ್ತರ ಕೊಟ್ಟಾದ ಮೇಲೆ ಬೇರೆ ನಿಯಮಾವಳಿಗಳ ಮೇಲೆ ತೆಗೆದುಕೊಳ್ಳುವ ಅಗತ್ಯವಿದ್ದರೆ ಹೆಚ್ಚು ಚರ್ಚೆಗೆ ಅವಕಾಶ ಮಾಡಿಕೊಡೋಣ. ಈಗಾಗಲೇ ಶೂನ್ಯವೇಳೆಯಲ್ಲಿ ತಾವು ಗಮನ ಸೆಳೆದಿದ್ದೀರಿ. ಸರ್ಕಾರದ ಪರವಾಗಿ ಅವರು ಉತ್ತರ ಕೊಡಲಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಸದಸ್ಯರ ಈ ವರ್ತನೆ ಸರಿ ಇಲ್ಲ. ನಾನು ಧರಣಿ ಮಾಡುತ್ತೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಗೆ ಬಂದು ಧರಣಿ ನಿರತರಾದರು. ಇವರ ಜೊತೆಗೆ ವಿರೋಧ ಪಕ್ಷದ ಉಪ ನಾಯಕರಾದ ಮಾನ್ಯ ಗೋವಿಂದ ಎಂ. ಕಾರಜೋಳ ಮತ್ತು ಇನ್ನಿತರ ಸದಸ್ಯರುಗಳು ಬಾವಿಗೆ ಬಂದರು)

ಅಧ್ಯಕ್ಷರು : ಮಾನ್ಯ ಗೋವಿಂದ ಕಾರಜೋಳ್‌ರವರೆ, ಈಗ ಸದನದಲ್ಲಿ ವಿರೋಧ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ಇಲ್ಲ. ಈಗ ಉಪನಾಯಕರಾದ ತಾವು ಇದ್ದೀರಿ. ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ. ನೀವು ನಿಮ್ಮ ಆಸನಗಳಿಗೆ ಹೋಗಿ. ಅವರು ಎದ್ದುನಿಂತರು ಎಂದ ತಕ್ಷಣ ನೀವೂ ಕೂಡ ಎದ್ದುನಿಂತುಕೊಂಡು ಬಿಡುವುದೇ ? ದಯಮಾಡಿ ನಿಮ್ಮ ಆಸನಗಳಿಗೆ ಹೋಗಿ

ಶ್ರೀ ವಾಟಾಳ್ ನಾಗರಾಜ್ : ನಮಗೆ ಈಗಲೇ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಅವಕಾಶ ಕೊಡುವುದು ನನ್ನ ವಿವೇಚನೆಗೆ ಬಿಟ್ಟದ್ದು.

ಶ್ರೀ ವಾಟಾಳ್ ನಾಗರಾಜ್ : ನಾನು ನಿಮ್ಮನ್ನು ಮಾತನಾಡಲು ಅವಕಾಶ ಕೊಡುವಂತೆ ಕೇಳಿಯೇ ಮಾತನಾಡಿದ್ದು.

ಅಧ್ಯಕ್ಷರು : ತಾವು ಅವಕಾಶ ಕೇಳಿರುವುದನ್ನ ನಾನು ನಿರಾಕರಿಸಿಲ್ಲ. ಆದರೆ ನೀವು ಅವರು ನಿಂತುಕೊಂಡ ತಕ್ಷಣ ಸದನದ ಬಾವಿಗೆ ಬಂದುಬಿಟ್ಟಿರಿ. ಅದು ಸರಿಯಲ್ಲ. ಆದಕಾರಣ ಮೊದಲು ನಿಮ್ಮ ನಿಮ್ಮ ಆಸನಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು : ಈ ಕಡೆಯ ಮಿತ್ರರುಗಳಿಗೆ ನನ್ನ ವಿನಂತಿಯೆಂದರೆ ಮೊದಲು ತಾವೆಲ್ಲರೂ ತಮ್ಮ ತಮ್ಮ ಆಸನಗಳಿಗೆ ಹೋಗಿ. ನಾನು ಅವಕಾಶ ಕೊಟ್ಟಿಲ್ಲ ಎಂದು ಹೇಳಿಲ್ಲ. ಅದಕ್ಕೆ ಮೊದಲೇ ನೀವೇ ಏಕೆ ತೀರ್ಮಾನಕ್ಕೆ ಬರುತ್ತೀರಿ ? ದಯಮಾಡಿ ತಾವೆಲ್ಲರೂ ತಮ್ಮ ತಮ್ಮ ಆಸನಗಳಿಗೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಗೋವಿಂದ ಕಾರಜೋಳರವರೆ, ದಯಮಾಡಿ ಕೇಳಿ. ನೀವು ವಿರೋಧ ಪಕ್ಷದ ಉಪ ನಾಯಕರಾಗಿದ್ದೀರಿ. ಅವರು ಎದ್ದು ನಿಂತರು ಅಂದ ತಕ್ಷಣ ನೀವುಗಳೆಲ್ಲರೂ ಬಾವಿಗೆ ಬಂದುಬಿಡುವ ಸಂಪ್ರದಾಯ ಒಳ್ಳೆಯದಲ್ಲ. ನಾನು ಇನ್ನೂ ಅವಕಾಶ ಕೊಡುವುದನ್ನು

ನಿರಾಕರಿಸಿಲ್ಲ. ಇನ್ನೂ ಆ ಬಗ್ಗೆ ನಾನು ತೀರ್ಪೆ ಕೊಟ್ಟಿಲ್ಲ. ಈ ಸದನದ ಗೌರವ ಹೆಚ್ಚಾಗುವ ರೀತಿಯಲ್ಲಿ ದಯಮಾಡಿ ತಾವುಗಳು ನಡೆದುಕೊಳ್ಳಬೇಕು.

(ಅಧ್ಯಕ್ಷರ ಆದೇಶದಂತೆ ಧರಣಿನಿರತರಾಗಿದ್ದು ಶ್ರೀವಾಟಾಳ್‌ನಾಗರಾಜ್ ಹಾಗೂ ಶ್ರೀ ಗೋವಿಂದ ಎಂ. ಕಾರಜೋಳ ಹಾಗೂ ಇನ್ನಿತರ ಸದಸ್ಯರುಗಳು ತಮ್ಮ ತಮ್ಮ ಆಸನಗಳಿಗೆ ಹೋಗಿ ಕುಳಿತುಕೊಂಡರು.)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ರಾಜ್ಯದ ಹಿತದೃಷ್ಟಿಯಿಂದಾಗಿ, ರಾಜ್ಯದ ಜಲವನ್ನು ಕಾಪಾಡುವ ದೃಷ್ಟಿಯಿಂದಾಗಿ ಬಹಳ ಗಹನವಾಗಿರತಕ್ಕಂಥ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಅದರಂತೆ ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದೆ. ನಮ್ಮ ಕಡೆಯ ಸದಸ್ಯರುಗಳು ಹೇಳುವುದು ಏನೆಂದರೆ ಇವೊತ್ತಿನ ಅಜೆಂಡಾದಲ್ಲಿರತಕ್ಕಂಥ ವಿಚಾರಗಳಲ್ಲಿ ಯಾವುದನ್ನೂ ತೆಗೆದುಕೊಂಡಿಲ್ಲ. ಇನ್ನೂ ಗಮನ ಸೆಳೆಯುವ ಸೂಚನೆಗಳಿವೆ. ಆದರೆ ಇವೊತ್ತು ಮೂರು ಗಂಟೆಗೆ ಸದನದ ಕಲಾಪ ಮುಗಿದು ಹೋಗುತ್ತದೆಯಾದ ಕಾರಣ ಸದಸ್ಯರುಗಳು ಎದ್ದುನಿಂತುಕೊಂಡು ಅಭಿಪ್ರಾಯ ವ್ಯಕ್ತಮಾಡಿದ್ದಾರಷ್ಟೆ. ವಾಟಾಳ್‌ನಾಗರಾಜ್‌ರವರು ಮಾತನಾಡಲು ಎದ್ದುನಿಂತರೆ ನನ್ನದೇನೂ ತಕರಾರಿಲ್ಲ. ಮಾನ್ಯ ವಾಟಾಳ್‌ನಾಗರಾಜ್‌ರವರಿಗೂ ಮಾತನಾಡಲು ತಾವು ಅವಕಾಶ ಕೊಡಿ. ಆದರೆ ನಮ್ಮವರಿಗೂ ಅವಕಾಶ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಸರ್ಕಾರ ಉತ್ತರ ಕೊಡುತ್ತದೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ಈಗ ತಾವು ಹೇಳಬೇಕೆಂದಿರುವುದನ್ನು ಒಂದು ನಿಮಿಷದಲ್ಲಿ ಹೇಳಿ. ಆಮೇಲೆ ನಾನು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಯೋಚನೆ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಆಡಳಿತ ಪಕ್ಷದ ಸದಸ್ಯರುಗಳು ಕುಳಿತುಕೊಳ್ಳಬೇಕು. ನಾನು ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಸಹಕರಿಸಿ. ಆಡಳಿತ ನಡೆಸುತ್ತಿರತಕ್ಕಂಥ ಪಕ್ಷದ ಸದಸ್ಯರುಗಳು ತಾವು. ದಯಮಾಡಿ ಕುಳಿತುಕೊಳ್ಳಿ. ಬಹಳ ಗಂಭೀರವಾಗಿದೆ ಪ್ರಶ್ನೆ. ದಯಮಾಡಿ ಕುಳಿತುಕೊಳ್ಳಬೇಕು. ವಾಟಾಳ್‌ನಾಗರಾಜ್‌ರವರಿಗೆ ತಾವು ಈಗ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವೊತ್ತು ಆಂಧ್ರಪ್ರದೇಶದ ಸರ್ವಪಕ್ಷಗಳ ನಿಯೋಗ ದೆಹಲಿಗೆ ಹೋಗಿ ಪ್ರಧಾನಮಂತ್ರಿಗಳಿಗೆ ಮನವೊಲಿಸುವ ಕಾರ್ಯವನ್ನು ಮಾಡಿದ್ದಾರೆ. ಈ ಬಗ್ಗೆ ಕರ್ನಾಟಕ ಸರ್ಕಾರದ ಸ್ಪಷ್ಟ ನಿಲುವೇನು ? ಕರ್ನಾಟಕ ಸರ್ಕಾರ ಆ ರೀತಿಯಲ್ಲಿ ತಮ್ಮ ನಿಲುವನ್ನು ಪ್ರದರ್ಶನ ಮಾಡದೇ ಇದ್ದರೆ, ಈಗಾಗಲೇ ಮಾಡಬೇಕಾಗಿತ್ತು, ಈ ಸದನ ಸೇರಿದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಅಥವಾ ಅದಕ್ಕೆ ಸಂಬಂಧಪಟ್ಟಂಥ ಮಂತ್ರಿಗಳು ಒಂದು ಹೇಳಿಕೆಯನ್ನು ಸದನದಲ್ಲಿ ಹೇಳಬೇಕಾಗಿತ್ತು. ಏಕೆಂದರೆ ಇದೊಂದು ಪ್ರಾಮುಖ್ಯವಾದಂಥ ವಿಚಾರ. ಈಗಾಗಲೇ ಆಂಧ್ರದ ಸರ್ವ ಪಕ್ಷಗಳ ನಿಯೋಗ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿರುವುದರಿಂದ ಕರ್ನಾಟಕ ಸರ್ಕಾರದ ನಿಲುವೇನು ಎಂಬುದನ್ನು ಹೇಳಬೇಕಾಗಿತ್ತು. ಮೊದಲಿನಿಂದಲೂ ನಮ್ಮಲ್ಲಿ ಹೇಗೆ ನಡೆದಿದೆಯೆಂದರೆ ಪ್ರಧಾನಮಂತ್ರಿಗಳ ಹತ್ತಿರ ಹೋಗುವವರೆಗೂ ನಾವು ನೀರು ಬಿಡುವುದಿಲ್ಲ,